**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಸಿ.ಸಿ. ನಂಃ 359/2015 ಸಿಡಬ್ಲೂ : 26 ಪಿಡಬ್ಲೂಃ 2

ಪ್ರಮಾಣವಚನ ಬೋಧಿಸಲಾಯಿತು ದಿಃ 10-10-2025

ಹೆಸರು : ಸಂದೀಪ್ ಸಿಂಗ್

ತಂದೆ ಹೆಸರು : ಪರುಶುರಾಮ್ ಸಿಂಗ್ ಮರುಗೋಳ್

ವಯಸ್ಸು : 45 ವರ್ಷ

ಉದ್ಯೋಗ : ಪಿ ಐ, ಹೇ ಸ್ಕಾಂ ಚಿಕ್ಕೋಡಿ

ವಾಸಸ್ಥಳ : ಚಿಕ್ಕೋಡಿ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು ಸೆಪ್ಟಂಬರ್ 2013 ರಿಂದ ಮೇ 2015 ವರೆಗೆ ವೃತ್ತ ನೀರೀಕ್ಷಕರು ಸೇಡಂ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಅವದಿಯಲ್ಲಿ ದಿಃ 24-05-2014 ರಂದು ಚಾ ಸಾ 25 ರವರಿಂದ ಸದರಿ ಪ್ರಕರಣದ ಕಡತವನ್ನು ಸ್ವೀಕರಿಸಿಕೊಂಡು ಅದೇ ದಿನ ಚಾ ಸಾ 9 ರಿಂದ 16 ರವರ ಹೇಳಿಕೆಯನ್ನು ಪಡೆದುಕೊಡಿರುತ್ತೇನೆ. ನಂತರ ಅದೇ ದಿನ ಪಂಚರಾದ ಚಾ ಸಾ 4 ಮತ್ತು 5 ರವರನ್ನು ಬರಮಾಡಿಕೊಂಡು ಮೃತ ಸತೀಶ್ ರವರ ಶವ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಈಗ ಗುರುತಿಸಿದ್ದು ಅದನ್ನು ನಿ ಪಿ 3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಇನೋರ್ವ ಮೃತನಾದ ಮಹೇಶ್ ಕಲಬುರಗಿ ಆಸ್ಪತ್ರೆಯಲ್ಲಿ ಇರುವುದರಿಂದ ಚಾ ಸಾ 24 ರವರಿಗೆ ಶವ ಪಂಚನಾಮೆ ಮಾಡಲು ಕಳುಹಿಸಿಕೊಟ್ಟಿರುತ್ತೇನೆ. ನಂತರ ಚಾ ಸಾ 1 ರವರು ತೋರಿಸಿದಂತೆ ಸ್ಥಳ ಪಂಚನಾಮೆಯನ್ನು ಚಾ ಸಾ 2 ಮತ್ತು 3 ರವರ ಸಮಕ್ಷಮ ಜರುಗಿಸಿರುತ್ತೇನೆ. ಘಟನಾ ಸ್ಥಳದಿಂದ ಒಂದು ಮೊಟಾರು ಸೈಕಲ್ ಬೇರಿಗ್ ಚೆಸ್ಸಿ ನಂ.MD2A14AZ4EWL08955 ನೇದ್ದನ್ನು ವಶಕ್ಕೆ ಪಡೆದುಕುಂಡಿರುತ್ತೇನೆ. ಅದೇರೀತಿ ಸದರಿ ಮೊಟಾರು ಸೈಕಲಿನ 4 ಭಾವ ಚಿತ್ರವನ್ನು ತೆಗೆದಿರುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆ ಹಾಗೂ ಭಾವ ಚಿತ್ರಗಳನ್ನು ನೋಡಿ ಗುರುತಿಸಿರುವುದರಿಂದ ಅವುಗಳನ್ನು ಕ್ರಮಾವಾಗಿ ನಿ ಪಿ 4 ರಿಂದ 8 ಎಂದು ಗುರುತಿಸಲಾಯಿತು. ಹಾಗೂ ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಭಾವ ಚಿತ್ರಗಳಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿ ಪಿ 5(ಎ) ಮತ್ತು 7(ಎ) ಎಂದು ಗುರುತಿಸಲಾಯಿತು. ನಂತರ ಚಾ ಸಾ 24 ರವರು ಮೃತ

ಮಹೇಶ್ ರವರ ಶವ ಪಂಚನಾರಮೆಯನ್ನು ತಂದು ಹಾಜರು ಪಡಿಸಿದ್ದು ಅದನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದು ಅದನ್ನು ನಿ ಪಿ 9 ಎಂದು ಗುರುತಿಸಲಾಯಿತು. ನಂತರ ದಿ. 28-05-2014 ರಂದು ಸಾಕ್ಷಿದಾರರಾದ ಚಾ ಸಾ 8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ. 30-05-2014 ರಂದು ಅಪಘಾತಕ್ಕೆ ಒಳಗಾದ ಲಾರಿ ಸಂಖ್ಯೆ ಎಂ ಎಚ್ 10 ಜಡ್ 0585 ನೇದ್ದನ್ನು ನಮ್ಮ ಠಾಣೆಯ ಸಿಬ್ಬಂದಿಯಾದ ಚಾ ಸಾ 17 ಮತ್ತು 18 ರವರು ತಂದು ಠಾಣೆಗೆ ಹಾಜರು ಮಾಡಿದ್ದು ಇರುತ್ತದೆ. ಸದರಿ ಲಾರಿಯನ್ನು ಪಂಚರಾದ ಚಾ ಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆಯ ಮೂಲಕ ಜಪ್ತಿ ಪಡಿಸಿರುತ್ತೇನೆ. ಹಾಗೂ ಸದರಿ ಪಂಚನಾಮೆಯ ಕಾಲಕ್ಕೆ ಸದರಿ ಲಾರಿಯ 4 ಭಾವ ಚಿತ್ರಗಳನ್ನು ತೆಗೆದುಕೊಂಡಿರುತ್ತೇನೆ. ಸಾಕ್ಷಿಯ ಸದರಿ ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 10 ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 10(ಎ) ಎಂದು ಗುರುತಿಸಲಾಯಿತು. ಹಾಗೂ ಸದರಿ ಭಾವ ಚಿತ್ರಗಳನ್ನು ನಿ ಪಿ 11 ರಿಂದ 14 ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಚಾ ಸಾ 1 ಮತ್ತು 9ರಿಂದ 15 ರವರ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾ ಸಾ 17 ಮತ್ತು 18 ರವರಿಂದ ವಾಹನದ ವರದಿಯನ್ನು ಹಾಜರು ಪಡಿಸಿದ್ದು ಅದನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ವರದಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ ಪಿ 15 ಮತ್ತು 16 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ ಪಿ 15(ಎ) ಮತ್ತು 16(ಎ) ಎಂದು ಗುರುತಿಸಲಾಯಿತು. ದಿ. 31-05-2014 ರಂದು ಆರೋಪಿತನು ಠಾಣೆಗೆ ಬಂದು ಹಾಜರಾಗಿದ್ದು ಆತನಿಗೆ ವಿಚಾರಿಸಲಾಗಿ ಸದರಿಯವನು ತಪ್ಪು ಒಪ್ಪಿ ಕೊಂಡಿರುವುದರಿಂದ ಆತನ ಮೇಲೆ ದಸ್ತಗಿರಿ ಕ್ರಮವನ್ನು ಜರುಗಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ನಂತರ ಅದೇ ದಿನ ಲಾರಿ ಮಾಲಿಕನಾದ ಮಲ್ಲಪ್ಪ ತಂದೆ ಭೀಮರಾಯ ರವರಿಗೆ ಅಪಘಾತಕ್ಕೆ ಒಳಗಾದ ಲಾರಿ ಸಂಖ್ಯೆ ಎಂ ಎಚ್ 10 ಜಡ್ 0585 ನೇದ್ದನ್ನು ಮುಚ್ಚಳಿಕೆ ಪತ್ರ ವನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಯು ಸದರಿ ಮುಚ್ಚಳಿಕೆ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 17 ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 17 (ಎ) ಎಂದು ಗುರುತಿಸಲಾಯಿತು.

ನಂತರ ದಿ.12-06-2014 ರಂದು ಮುಕುಂದು ಹನುಮಂತ ಮಿಸ್ಸಿ ರವರಿಂದ ಮುಚ್ಚಳಿಕೆ ಪತ್ರ ವನ್ನು ಪಡೆದುಕೊಂಡು ಅಪಘಾತಕ್ಕೆ ಒಳಗಾದ ಮೊಟಾರು ಸೈಕಲ್ ಕೆ ಎ 32 ಟಿ ಕ್ಯೂ 4211 ನೇದ್ದನ್ನು ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಯು ಸದರಿ ಮುಚ್ಚಳಿಕೆ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 18 ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 18 (ಎ) ಎಂದು ಗುರುತಿಸಲಾಯಿತು. ದಿ. 18-08-2014 ರಂದು

ಅಪಘಾತಕ್ಕೆ ಎರಡು ವಾಹನಗಳ ಎಂ ವಿ ಎ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಡಿರುತ್ತೇನೆ. ಸಾಕ್ಷಿಯು ಸದರಿ ವಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 19 ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 19(ಎ) ಎಂದು ಗುರುತಿಸಲಾಯಿತು. ದಿ.20-08-2014 ರಂದು ಮೃತ ಮಹೇಶ್ ತಂದೆ ರಾಮಪ್ಪ ರವರ ಶವ ಪರೀಕ್ಷಾ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 20 ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 20 (ಎ) ಎಂದು ಗುರುತಿಸಲಾಯಿತು. ಅದೇ ದಿನ ಮೃತ ಸತೀಶ್ ತಂದೆ ಮರೆಪ್ಪ ರವರ ಶವ ಪರೀಕ್ಷಾ ವಾದಿಯನ್ನು ಸೇಡಂ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 21 ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 21 (ಎ) ಎಂದು ಗುರುತಿಸಲಾಯಿತು. ನಂತರ ತನಿಖೆಯು ಪೂರ್ಣಗೊಂಡು ಆರೋಪಿತನ ವಿರುದ್ದ ಸಾಕಷ್ಟು ಸಾಕ್ಷಾ ದಾರ ಇರುವುದರಿಂದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದಃ

ಈ ಅವದಿಯಲ್ಲಿ ದಿಃ 24-05-2014 ರಂದು ಚಾ ಸಾ 25 ರವರಿಂದ ಸದರಿ ಪ್ರಕರಣದ ಕಡತವನ್ನು ಸ್ವೀಕರಿಸಿಕೊಂಡು ಅದೇ ದಿನ ಚಾ ಸಾ 9 ರಿಂದ 16 ರವರ ಹೇಳಿಕೆಯನ್ನು ಪಡೆದುಕೊಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಅದೇ ದಿನ ಪಂಚರಾದ ಚಾ ಸಾ 4 ಮತ್ತು 5 ರವರನ್ನು ಬರಮಾಡಿಕೊಂಡು ಮೃತ ಸತೀಶ್ ರವರ ಶವ ಪಂಚನಾಮೆಯನ್ನು ಜರುಗಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ ಇನ್ನೋರ್ವ ಮೃತನಾದ ಮಹೇಶ್ ಕಲಬುರಗಿ ಆಸ್ಪತ್ರೆಯಲ್ಲಿ ಇರುವುದರಿಂದ ಚಾ ಸಾ 24 ರವರಿಗೆ ಶವ ಪಂಚನಾಮೆ ಮಾಡಲು ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಚಾ ಸಾ 1 ರವರು ತೋರಿಸಿದಂತೆ ಸ್ಥಳ ಪಂಚನಾಮೆಯನ್ನು ಚಾ ಸಾ 2 ಮತ್ತು 3 ರವರ ಸಮಕ್ಷಮ ಜರುಗಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಘಟನಾ ಸ್ಥಳದಿಂದ ಒಂದು ಮೋಟಾರು ಸೈಕಲ್ ಬೇರಿಗ್ ಚೆಸ್ಸಿ ನಂ.MD2A14AZ4EWL08955 ನೇದ್ದನ್ನು ವಶಕ್ಕೆ ಪಡೆದುಕುಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇರೀತಿ ಸದರಿ ಮೋಟಾರು ಸೈಕಲಿನ 4 ಭಾವ ಚಿತ್ರವನ್ನು ತೆಗೆದಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಚಾ ಸಾ 24

ರವರು ಮೃತ ಮಹೇಶ್ ರವರ ಶವ ಪಂಚನಾರಮೆಯನ್ನು ತಂದು ಹಾಜರು ಪಡಿಸಿದ್ದು ಅದನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ದಿ. 28-05-2014 ರಂದು ಸಾಕ್ಷಿದಾರರಾದ ಚಾ ಸಾ 8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿ. 30-05-2014 ರಂದು ಅಪಘಾತಕ್ಕೆ ಒಳಗಾದ ಲಾರಿ ಸಂಖ್ಯೆ ಎಂ ಎಚ್ 10 ಜಡ್ 0585 ನೇದ್ದನ್ನು ನಮ್ಮ ಠಾಣೆಯ ಸಿಬ್ಬಂದಿಯಾದ ಚಾ ಸಾ 17 ಮತ್ತು 18 ರವರು ತಂದು ಠಾಣೆಗೆ ಹಾಜರು ಮಾಡಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಲಾರಿಯನ್ನು ಪಂಚರಾದ ಚಾ ಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆಯ ಮೂಲಕ ಜಪ್ತಿ ಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಹಾಗೂ ಸದರಿ ಪಂಚನಾಮೆಯ ಕಾಲಕ್ಕೆ ಸದರಿ ಲಾರಿಯ 4 ಭಾವ ಚಿತ್ರಗಳನ್ನು ತೆಗೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ನಂತರ ಅದೇ ದಿನ ಚಾ ಸಾ 1 ಮತ್ತು 9ರಿಂದ 15 ರವರ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ದಿನ ಚಾ ಸಾ 17 ಮತ್ತು 18 ರವರಿಂದ ವಾಹನದ ವರದಿಯನ್ನು ಹಾಜರು ಪಡಿಸಿದ್ದು ಅದನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿ. 31-05-2014 ರಂದು ಆರೋಪಿತನು ಠಾಣೆಗೆ ಬಂದು ಹಾಜರಾಗಿದ್ದು ಆತನಿಗೆ ವಿಚಾರಿಸಲಾಗಿ ಸದರಿಯವನು ತಪ್ಪು ಒಪ್ಪಿ ಕೊಂಡಿರುವುದರಿಂದ ಆತನ ಮೇಲೆ ದಸ್ತಗಿರಿ ಕ್ರಮವನ್ನು ಜರುಗಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಅದೇ ದಿನ ಲಾರಿ ಮಾಲಿಕನಾದ ಮಲ್ಲಪ್ಪ ತಂದೆ ಭೀಮರಾಯ ರವರಿಗೆ ಅಪಘಾತಕ್ಕೆ ಒಳಗಾದ ಲಾರಿ ಸಂಖ್ಯೆ ಎಂ ಎಚ್ 10 ಜಡ್ 0585 ನೇದ್ದನ್ನು ಮುಚ್ಚಳಿಕೆ ಪತ್ರ ವನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ನಂತರ ದಿ.12-06-2014 ರಂದು ಮುಕುಂದು ಹನುಮಂತ ಮಿಸ್ಸಿ ರವರಿಂದ ಮುಚ್ಚಳಿಕೆ ಪತ್ರ ವನ್ನು ಪಡೆದುಕೊಂಡು ಅಪಘಾತಕ್ಕೆ ಒಳಗಾದ ಮೊಟಾರು ಸೈಕಲ್ ಕೆ ಎ 32 ಟಿ ಕ್ಯೂ 4211 ನೇದ್ದು ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿ. 18-08-2014 ರಂದು ಅಪಘಾತಕ್ಕೆ ಎರಡು ವಾಹನಗಳ ಎಂ ವಿ ಎ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿ.20-08-

2014 ರಂದು ಮೃತ ಮಹೇಶ್ ತಂದೆ ರಾಮಪ್ಪ ರವರ ಶವ ಪರೀಕ್ಷಾ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ದಿನ ಮೃತ ಸತೀಶ್ ತಂದೆ ಮರೆಪ್ಪ ರವರ ಶವ ಪರೀಕ್ಷಾ ವಾದಿಯನ್ನು ಸೇಡಂ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ತನಿಖೆಯು ಪೂರ್ಣಗೊಂಡು ಆರೋಪಿತನ ವಿರುದ್ದ ಸಾಕಷ್ಟು ಸಾಕ್ಷಾ ದಾರ ಇರುವುದರಿಂದ ಮಾನ್ಯ ನ್ಯಾ ಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಘಟನೆ ನಡೆದ ದಿನ ಸ್ಥಳದಲ್ಲಿ ಯಾವುದೇ ವಾಹನ ಇರಲಿಲ್ಲ ಅದನ್ನು ನಂತರ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಿಲ್ಲ. ಚಾ ಸಾ 1 ರವರಿಗೆ ಪರಿಹಾರ ಕೊಡುವ ಉದ್ದೇಶದಿಂ ಸುಳ್ಳು ಪ್ರಕರಣವನ್ನು ಸಲ್ಲಿಸಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಿಲ್ಲ. ಆರೋಪಿಗೂ ಹಾಗೂ ಈ ಪ್ರಕರಣಕ್ಕು ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಿಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ನಾನೇ ಪಂಚನಾಮೆಯನ್ನು ತಯಾರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾ ಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**